# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ

ಎಸ್.ಸಿ. ನಂ. 25/2025

ಪಿಡಬ್ಲ್ಯೂ: 03
ಸಿಡಬ್ಲ್ಯೂ: 12

**ದಿನಾಂಕ: 29-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | : ಬೊಮ್ಮಲಿಂಗ |
| ತಂದೆಯ ಹೆಸರು | : ಪೆದ್ದಪ್ಪಯರ ಲಿಂಗಣ್ಣ |
| ವಯಸ್ಸು | : 25 ವರ್ಷ |
| ಉದ್ಯೋಗ | : ಗಾರೆಕೆಲಸ |
| ವಾಸ ಸ್ಥಳ | : ಕೋನಾಪುರ |

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರವರಿಂದ:**

ಚಾಸಾ–**1** / ನಾಗರಾಜ್**,** ಚಾಸಾ–**13** ರಿಂದ **18** ಇವರ ಬಗ್ಗೆ ಗೊತ್ತು. ಅವರೆಲ್ಲಾ ನಮ್ಮ ಊರಿನವರು. ಆರೋಪಿತರು ಬೊಮ್ಮದೇವರಹಳ್ಳಿಯವರು. ಆರೋಪಿತರ ತಮ್ಮನಹಳ್ಳಿ ಗೇಟ್ ಬಳಿ ಕಿರಾಣಿ ಅಂಗಡಿಯನ್ನು ಇಟ್ಟುಕೊಂಡಿದ್ದಾರೆ. ಈಗ **4** ವರ್ಷಗಳ ಹಿಂದೆ ರಾತ್ರಿ ಸಮಯದಲ್ಲಿ ಆರೋಪಿತ ನಿಂಗಾರೆಡ್ಡಿ ಮಚ್ಚನ್ನು ತೆಗೆದುಕೊಂಡು ನನ್ನ ಬಲಗೈ ಹೆಬ್ಬೆಟ್ಟಿನ ಹತ್ತಿರ ಹೊಡೆದ. ಅಲ್ಲದೇ ಚಾಸಾ–**1** / ನಾಗರಾಜ ಬಿನ್ ಮಾರುತಿ ಈತನ ಬಿನ್ನಿನ ಮೇಲೆ ಆರೋಪಿ ಶ್ರೀನಿವಾಸ ಲಾಂಗ್ ನಿಂದ ಆತನಿಗೆ ಹಲ್ಲೆ ಮಾಡಿದ. ಯಾವ ವಿಚಾರಕ್ಕಾಗಿ ಗಲಾಟೆ ಆಯಿತೆಂದು ಗೊತ್ತಿಲ್ಲ. ಅಲ್ಲಿ ಗಲಾಟೆಯಾಗುತ್ತಿದೆ ಎಂಬ ಕಾರಣಕ್ಕಾಗಿ ನಾನು ಅಲ್ಲಿ ಹೋಗಿ ನಿಂತುಕೊಂಡಿದ್ದೆ. ಕೋನಾಪುರ ಹಾಗೂ ಬೊಮ್ಮದೇವರಹಳ್ಳಿ ಗ್ರಾಮಸ್ಥರ ಮದ್ಯೆ ಗಲಾಟೆಯಾಗಿದೆ. ಆ ದಿನ ನನಗೆ ಹಲ್ಲೆ ಮಾಡಿದ ನಿಂಗಾರೆಡ್ಡಿ ನ್ಯಾಯಾಲಯದಲ್ಲಿದ್ದು ಆತನನ್ನು ಗುರುತಿಸುತ್ತೇನೆ. ನನಗೆ ಹಲ್ಲೆ ಮಾಡಲು ಬಳಸಿದ ಮಚ್ಚನ್ನು ನೋಡಿದರೆ ಗುರುತಿಸಬಲ್ಲೆ. ಅದರಿಂದ ಹಲ್ಲೆ ಮಾಡಿದ್ದರಿಂದಾಗಿ ನನ್ನ ಬಲಗೈ ಹೆಬ್ಬೆಟ್ಟಿನ ನರ ಕತ್ತರಿಸಿತ್ತು ಮತ್ತು ನನ್ನ ಬಟ್ಟೆಗೆಲ್ಲಾ ರಕ್ತ ತಗಲಿತ್ತು. ನಾನು ಆ ದಿನ ಬಿಳಿ ಬಟ್ಟೆಯನ್ನು ಧರಿಸಿದ್ದೆ. ಅದನ್ನು ಪೊಲೀಸರು ತೆಗೆದುಕೊಂಡಿದ್ದಾರೆ. ಆ ಸ್ಥಳಕ್ಕೆ ಅಂಬುಲೆನ್ಸ್ ಬಂದಿದ್ದು ನನ್ನನ್ನು ರಾಂಪುರ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆ ದಿನ ಶ್ರೀನಿವಾಸ ಮತ್ತು ನಾಗರಾಜ್ ಇವರಿಗೂ ಕೂಡಾ ಏಟುಗಳಾದವು. ಈಗ ನನಗೆ ತೋರಿಸಲಾದ ನಿಪಿ–**2** ಪೊಟೋದಲ್ಲಿ ನಾನು ಇದ್ದೇನೆ. ಆ ಘಟನೆಯಲ್ಲಿ ಶ್ರೀನಿವಾಸನ ಬಲಗೈ ಬೆರಳುಗಳು ಕತ್ತರಿಸಿದ್ದವು. ಅದರಿಂದಾಗಿ ಆತನ ಟೀಶರ್ಟಿಗೆ ರಕ್ತ ತಗಲಿತ್ತು. ನನ್ನ ಶರ್ಟನ್ನು ಹಾಗೂ ನನಗೆ ಹಲ್ಲೆ ಮಾಡಿದ ಲಾಂಗನ್ನು ನೋಡಿದರೆ ಗುರುತಿಸಬಲ್ಲೆ. ಆ ದಿನ ನನಗೆ ಆರೋಪಿ ನಿಂಗಾರೆಡ್ಡಿ ಮಾತ್ರ ಕಂಡ. ತನಿಖಾಧಿಕಾರಿಗೆ ನಾನು ಹೇಳಿಕೆ ಕೊಟ್ಟಿದ್ದೇನೆ. (ಸೀಲು ಮಾಡಿದ ಬಟ್ಟೆಯ ಚೀಲಗಳನ್ನು ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಶ್ರೀ ಎನ್.ಎಸ್.ಎಂ. ವಕೀಲರ ಸಮಕ್ಷಮ ತೆರೆಯಲಾಯಿತು.) ಲಾಂಗನ್ನು ನೋಡುತ್ತಿದ್ದು ಅದನ್ನು ಮುದ್ದೆ ಮಾಲು **1** ಎಂದು ಗುರುತಿಸಲಾಯಿತು. ನನ್ನ ಶರ್ಟನ್ನು ನೋಡುತ್ತಿದ್ದು ಅದನ್ನು ಮುದ್ದೆ ಮಾಲು **2** ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಶ್ರೀ ಎನ್.ಎಸ್.ಎಂ. ವಕೀಲರಿಂದ ಆರೋಪಿತನ ಪರವಾಗಿಃ**

ಕೋರಿಕೆಯ ಮೇರೆಗೆ **2** ನೇ ಅವಧಿಯವರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಎನ್.ಎಸ್.ಎಂ. ವಕೀಲರಿಂದ ಆರೋಪಿತನ ಪರವಾಗಿಃ**

**2.** ನನಗೆ ಓದಲು ಬರೆಯಲು ಬರುವುದಿಲ್ಲ. ನಮ್ಮ ಕೋನಾಪುರಕ್ಕೂ ರಾಜಾಪುರಕ್ಕೂ **4** ಕಿಮೀಗಳ ಅಂತರವಿದೆ. ನಾನು ಖಾಯಂ ಆಗಿ ರಾಜಾಪುರದಲ್ಲಿರುತ್ತೇನೆ ಎನ್ನುವುದು ನಿಜ. ಈ ದಿನವೂ ಕೂಡಾ ನಾನು ರಾಜಾಪುರದಿಂದ ಬಂದಿದ್ದೇನೆ ಎನ್ನುವುದು ನಿಜ. ಚಾಸಾ**–16 /** ಚಿದಾನಂದ ನನ್ನ ಚಿಕ್ಕಪ್ಪ ಎನ್ನುವುದು ಸರಿಯಲ್ಲ. ನನ್ನ ಕಸುಬು ಮೇಕೆ ಕಾಯುವುದು ಎನ್ನುವುದು ನಿಜ. ನಾನು ರಾಜಾಪುರದಲ್ಲಿ ವಾಸವಾಗಿರುವ ಕಾರಣ ಈ ಗಲಾಟೆ ವಿಚಾರವಾಗಿ ನನಗೇನೂ ಗೊತ್ತಿಲ್ಲ ಎನ್ನುವುದು ನಿಜ. ನಾನು ಮೇಕೆಗೆ ಸೊಪ್ಪು ತರಲು ಹೋದಾಗ ಮಚ್ಚು ಕೈಜಾರಿ ನನ್ನ ಕೈಗೆ ತಗಲಿ ನನಗೆ ಗಾಯವಾಯಿತು ಎನ್ನುವುದು ನಿಜ. ಅದೇ ರೀತಿ ನಾನು ವೈದ್ಯರಿಗೆ ಚಿಕಿತ್ಸೆಗೆಂದು ಹೋದಾಗ ಹೇಳಿದ್ದೇನೆ ಎನ್ನುವುದು ನಿಜ. ಶ್ರೀನಿವಾಸನಿಗೆ ಮಚ್ಚಿನ ಏಟಿನಿಂದಾಗಿ ಬೆರಳು ಕತ್ತಿರಿಸುವುದನ್ನು ನಾನು ಸ್ವತಃ ನೋಡಿಲ್ಲ ಎನ್ನುವುದು ನಿಜ. ಆರೋಪಿತರ ಪೈಕಿ ನಿಂಗಾರೆಡ್ಡಿ ಯಾರೆಂದು ನನಗೆ ಗುರುತಿಸಲು ಸಾಧ್ಯವಾಗುವುದಿಲ್ಲ.

**3.** ಆ ದಿನ ಮಚ್ಚನ್ನು ಯಾರು ತೆಗೆದುಕೊಂಡು ಬಂದರೆಂದು ನನಗೆ ಗೊತ್ತಿಲ್ಲ. ಈ ದಿನವೇ ಆ ಮಚ್ಚನ್ನು ಮೊದಲ ಬಾರಿಗೆ ನೋಡುತ್ತಿದ್ದೇನೆ ಎನ್ನುವುದು ನಿಜ. ಮುದ್ದೆ ಮಾಲು **1** ರಂತಹ ಮಚ್ಚು ಸಾಮಾನ್ಯವಾಗಿ ಎಲ್ಲಾ ಕಡೆಗೂ ದೊರುತ್ತದೆ ಎನ್ನುವುದು ನಿಜ. ಮುದ್ದೆ ಮಾಲು **2** ಶರ್ಟು ನನ್ನದಲ್ಲ ಎನ್ನುವುದು ಸರಿಯಲ್ಲ. ತನಿಖಾಧಿಕಾರಿಗೆ ನಾನು ಏನು ಹೇಳಿಕೆ ಕೊಟ್ಟಿದ್ದೇನೆಂದು ನನಗೆ ಮಾಹಿತಿ ಇಲ್ಲ ಎನ್ನುವುದು ನಿಜ. ನನ್ನ ಹೇಳಿಕೆಯನ್ನು ಎಲ್ಲಿ ಮಾಡಿಕೊಳ್ಳಲಾಯಿತು ಎಂದು ನನಗೆ ಗೊತ್ತಿಲ್ಲ ಎನ್ನುವುದು ನಿಜ. ಪೊಲೀಸ್ ಠಾಣೆಯಲ್ಲಿ ನನಗೆ **5–6** ಕಾಗದಪತ್ರಗಳಿಗೆ ಸಹಿ ಮಾಡು ಎಂದು ಹೇಳಿದ ಕಾರಣ ನಾನು ಸಹಿ ಮಾಡಿದ್ದೇನೆ ಎನ್ನುವುದು ನಿಜ. ಯಾವ ಪೊಲೀಸರು ನನ್ನ ಹೇಳಿಕೆ ಮಾಡಿಕೊಂಡಿದ್ದಾರೆಂದು ಗೊತ್ತಿಲ್ಲ ಎನ್ನುವುದು ನಿಜ. ಯಾರ ಯಾರ ಮಧ್ಯೆ ಗಲಾಟೆಯಾಯಿತು ಎಂದು ನನಗೆ ಗೊತ್ತಿಲ್ಲ ಎನ್ನುವುದು ನಿಜ. ಪೊಟೋವನ್ನು ಯಾವ ಕಾರಣಕ್ಕಾಗಿ ತೆಗೆಯಲಾಯಿತು ಮತ್ತು ಯಾವ ದಿನ

ಹಾಗೂ ಯಾವ ವೇಳೆಗೆ ತೆಗೆಯಾಲಾಯಿತು ಎಂದು ನನಗೆ ಗೊತ್ತಿಲ್ಲ ಎನ್ನುವುದು ನಿಜ. ಪೊಲೀಸರು ನನಗೆ ಹೇಳಿಕೊಟ್ಟ ಹಾಗೆ ನಾನು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ನಿಜ.

**ಮರು ವಿಚಾರಣೆ: ಸರ್ಕಾರಿ ಅಭಿಯೋಜಕರಿಂದಃ**

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲು: ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

**4.** ನನಗೆ ಸಹಿ ಮಾಡಲು ಬರುವುದಿಲ್ಲ ಕಾರಣ ಹೆಬ್ಬೆಟ್ಟಿನ ರುಜು ಮಾಡುತ್ತೇನೆ ಎನ್ನುವುದು ನಿಜ. ಕಾರಣ ಪೊಲೀಸರು ನನ್ನ ಸಹಿಗಳನ್ನು ಪಡೆದಿಲ್ಲ ಎನ್ನುವುದು ನಿಜ. ಮೇಕೆ ಸೊಪ್ಪಿನ ವಿಚಾರವಾಗಿ ನಾನು ಪೊಲೀಸ್ ಠಾಣೆಗೆ ಹೋಗಿಲ್ಲ ಎನ್ನುವುದು ನಿಜ. ಆ ಸೊಪ್ಪನ್ನು ತರುವಾಗ ಗಾಯಗೊಂಡಿದ್ದೇನೆಂದು ಹೇಳಿ ವೈದ್ಯರ ಬಳಿ ನಾನು ಹೋಗಿಲ್ಲ ಎನ್ನುವುದು ನಿಜ. ಯಾವ ತಾರೀಖು, ತಿಂಗಳು ಹಾಗೂ ವರ್ಷದಂದು ಮೇಕೆ ಸೊಪ್ಪನ್ನು ತರಲು ಹೋದಾಗ ಗಾಯವಾಯಿತು ಎಂದು ಹೇಳಲು ಬರುವುದಿಲ್ಲ ಎನ್ನುವುದು ನಿಜ. ಗಲಾಟೆಯ ವಿಷಯ ತಂತಾನೆ ಪೊಲೀಸರಿಗೆ ಗೊತ್ತಾಗುವುದಿಲ್ಲ, ನಾವು ಹೇಳಿದಾಗಲೇ ಗೊತ್ತಾಗುತ್ತದೆ ಎನ್ನುವುದು ಗೊತ್ತಿಲ್ಲ. ನಿಂಗಪ್ಪ ಮಚ್ಚಿನಿಂದ ಹೊಡೆದಿದ್ದಾನೆ ಎಂಬ ಕಾರಣಕ್ಕಾಗಿ ನಾನು ಗಾಯಗೊಂಡೆ ಎನ್ನುವುದು ಸರಿಯಲ್ಲ. ರಾಜಾಪುರಕ್ಕೆ ಹೋಗಬೇಕಾದಲ್ಲಿ ಕಣ್ ಕುಪ್ಪೆ ಗೇಟ್ ಮೂಲಕವೇ ಹೋಗಬೇಕು ಎನ್ನುವುದು ನಿಜ. ಅಲ್ಲಿ ಆರೋಪಿತರಿಗೆ ಸೇರಿದ ಡಬ್ಬ ಅಂಗಡಿ ಇದೆ ಎನ್ನುವುದು ಗೊತ್ತಿಲ್ಲ. ನಾನು ಶರ್ಟನ್ನು ನೀಡುವಾಗಲೇ ಪೊಲೀಸರು ನಿಪಿ–**2** ರಂತೆ ಪೊಟೋ ತೆಗೆದರು ಎಂದರೆ ಆ ಪೊಟೋದಲ್ಲಿ ನಾನು ಇಲ್ಲ. ನಾನೇ ಆಗ ಹಾಜರಿದ್ದು ನನ್ನ ಶರ್ಟನ್ನು ಹಾಜರುಪಡಿಸಿದ್ದು ಕಾರಣ ಮಹಜರ್ ಮಾಡಿ ನನ್ನ ಹೆಬ್ಬೆಟ್ಟಿನ ರುಜು ತೆಗೆದುಕೊಂಡರು ಎಂದರೆ ನಾನು ಹೆಬ್ಬೆಟ್ಟಿನ ರುಜು ಮಾಡಿರುವುದು ಗೊತ್ತು. ಶಿವಕುಮಾರಸ್ವಾಮಿ ಆಗ ಅಲ್ಲಿ ಇದ್ದರು ಎನ್ನುವುದು ಸರಿಯಲ್ಲ. ಘಟನೆಯ ಬಗ್ಗೆ ನಾನು ಮುಂಜಾನೆಯ ಕಲಾಪದಲ್ಲಿ ಸರಿಯಾಗಿ ಹೇಳಿದ್ದು ಈಗ ಮದ್ಯಾಹ್ನದ ವಿರಾಮದ ವೇಳೆಯಲ್ಲಿ ಅವರೊಂದಿಗೆ ರಾಜಿ ಮಾಡಿಕೊಂಡು ಈಗ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ಪಾಟೀ ಸವಾಲು ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ

ಎಸ್.ಸಿ. ನಂ. 25/2025

ಪಿಡಬ್ಲ್ಯೂ: 05
ಸಿಡಬ್ಲ್ಯೂ: 15

**ದಿನಾಂಕ: 29-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | : ಪೆನ್ನಯ್ಯ |
| ತಂದೆಯ ಹೆಸರು | : ಸಿದ್ದಯ್ಯ |
| ವಯಸ್ಸು | : 38 ವರ್ಷ |
| ಉದ್ಯೋಗ | : ಟೈಲ್ಸ್ ಕೆಲಸ |
| ವಾಸ ಸ್ಥಳ | : ಕೋನಾಪುರ |

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರವರಿಂದ:**

ಚಾಸಾ–1 ಕೋನಾಪುರದವರು. ಚಾಸಾ–12 ರಿಂದ 14 ಮತ್ತು 16 ರಿಂದ 18 ಇವರುಗಳು ಕೋನಾಪುರ ಗ್ರಾಮದವರು. ನನಗೆ ಆರೋಪಿತರ ಗುರುತು ಇರುವುದಿಲ್ಲ ಅವರು ಯಾವ ಊರಿನವರೆಂದು ಗೊತ್ತಿಲ್ಲ. ಈಗ 6 ವರ್ಷಗಳ ಹಿಂದೆ ನಾನು ಕೆಲಸ ಮಾಡಿ ಮನೆ ಕಡೆಗೆ ಹೋಗುತ್ತಿದ್ದೆ ಆಗ ಪೊಲೀಸರು ನನ್ನನ್ನು ಕರೆಸಿ ನನ್ನ ಸಹಿ ಪಡೆದರು. ಈ ಕೇಸಿಗೆ ಸಂಬಂಧಿಸಿದಂತೆ ನಾನೇನೂ ಹೇಳಿಕೆ ಕೊಟ್ಟಿಲ್ಲ. ಬೊಮ್ಮಲಿಂಗ, ನಾಗರಾಜು ಹಾಗೂ ಶ್ರೀನಿವಾಸನಿಗೆ ಏನಾಗಿದೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲು: ಮಾನ್ಯ ಸರ್ಕಾರಿ ಅಭಿಯೋಜಕರವರಿಂದ:**

**2**. ದಿನಾಂಕ **11–10–2020** ರಂದು ರಾತ್ರಿ **7.30** ಕ್ಕೆ ನಾನುನಮ್ಮ ಗ್ರಾಮದ ನಾಗರಾಜ್, ಬೊಮ್ಮಲಿಂಗ ಶ್ರೀನಿವಾಸ ಬೊಮ್ಮೇಶ ಇವರೊಂದಿಗೆ ನಿಂತುಕೊಂಡಿದ್ದೆ. ಆಗ ಆರೋಪಿತರಾದ ನಿಂಗಾರೆಡ್ಡಿ ಚಿದಾನಂದನಿಗೆ ಪೋನ್ ಮಾಡಿ ದೈರ್ಯವಿದ್ದರೆ ಕಣ್ ಕುಪ್ಪೆ ಕ್ರಾಸ್ ಬಳಿ ಬರುವಂತೆ ಹೇಳಿದ ಅದರಂತೆ ಅಲ್ಲಿಗೆ ನಾವುಗಳೆಲ್ಲಾ ಹೋದಾಗ ರಾತ್ರಿ **8.30** ಕ್ಕೆ ಆರೋಪಿತರು ಹಳೆಯ ಚುನಾವಣಾ ದ್ವೇಷವನ್ನು ಮನಸ್ಸಿನಲ್ಲಿಟ್ಟುಕೊಂಡು ಕೈಯಲ್ಲಿ ಮಚ್ಚು ದೊಣ್ಣೆ ಮತ್ತು ಕಲ್ಲುಗಳನ್ನು ಹಿಡಿದುಕೊಂಡು ನಿಮ್ಮೆಲ್ಲರನ್ನು ಕೊಲೆ ಮಾಡುತ್ತೇವೆಂದು ಅವಾಚ್ಯ ಶಬ್ದಗಳಿಂದ ಬೈಯುತ್ತಾ ಆರೋಪಿ ಬಸವರಾಜ್ ಕಲ್ಲಿನಿಂದ ನನ್ನಬೆನ್ನಿಗೆ ಹೊಡೆದ, ಲೋಕೇಶ ಬೊಮ್ಮೇಶನಿಗೆ ದೊಣ್ಣೆಯಿಂದ ಮೈಕೈಗೆ ಹೊಡೆದು ನೋವುಂಟು ಮಾಡಿದ ಮತ್ತು ಶ್ರೀನಿವಾಸನನ್ನು ಆರೋಪಿತರಾದ ಲೋಕೇಶ, ಯರ್ರಿಸ್ವಾಮಿ, ಶಿವರಾಜ್ ಹಾಗೂ ಬಸವರಾಜ್ ಇವರುಗಳು ಹಿಡಿದುಕೊಂಡಿದ್ದು ಮಲಿಯಮ್ಮ ಮತ್ತು ನಿಂಗಾರೆಡ್ಡಿ ತಮ್ಮಕೈಯಲ್ಲಿದ್ದ ಮಚ್ಚನ್ನು

ಕಿತ್ತುಕೊಂಡು ಶ್ರೀನಿವಾಸನ ಕುತ್ತಿಗೆ ಮಚ್ಚನ್ನು ಹಾಕಿ ಹಲ್ಲೆ ಮಾಡಲು ಹೋದಾಗ ಆತ ತನ್ನ ಎಡಗೈ ಅಡ್ಡ ಕೊಟ್ಟಿದ್ದರಿಂದ ಆತನ ಎಡಗೈಗೆ ಹೊಡೆತ ಬಿತ್ತು ಹಾಗೂ ನಾಗರಾಜನನ್ನು ಮಲಿಯಮ್ಮ, ಶಿವರಾಜ್, ಲೋಕೇಶ್ ಹಾಗೂ ಬಸವರಾಜ್ ಬಿಗಿಯಾಗಿ ಹಿಡಿದುಕೊಂಡಾಗ ನಿಂಗಾರೆಡ್ಡಿ ತನ್ನ ಕೈಯಲ್ಲಿದ್ದ ಮಚ್ಚಿಂದ ನಾಗರಾಜನ ಕುತ್ತಿಗೆ ಹೊಡೆಯಲು ಹೋಗಿದ್ದು ಆತ ತಪ್ಪಿಸಿಕೊಂಡಿದ್ದರಿಂದ ಬಲ ಬುಜಕ್ಕೆ ಮಚ್ಚಿನಿಂದ ಹೊಡೆದು ರಕ್ತಗಾಯ ಮಾಡಿದರು ಮತ್ತು ಬೊಮ್ಮಲಿಂಗನಿಗೆ ಮಲಿಯಮ್ಮ, ಯರ್ರಿಸ್ವಾಮಿ ಲೋಕೇಶ ಶಿವರಾಜ್ ಇವರುಗಳು ಬಿಗಿಯಾಗಿ ಹಿಡಿದುಕೊಂಡಿದ್ದರಿಂದ ನಿಂಗಾರೆಡ್ಡಿ ಮಚ್ಚಿನಿಂದ ಬೊಮ್ಮಲಿಂಗನ ಕುತ್ತಿಗೆಗೆ ಹೊಡೆದು ಕೊಲೆ ಮಾಡಲು ಹೋದಾಗ ತಪ್ಪಿಸಿಕೊಳ್ಳಲು ಬಲಗೈ ಅಡ್ಡ ತಂದಿದ್ದರಿಂದ ಆತನ ಬಲಗೈ ಮತ್ತು ಎಡಗೈಗೆ ಮಚ್ಚಿನಿಂದ ಹೊಡತ ಬಿತ್ತು ಎನ್ನುವುದು ಸರಿಯಲ್ಲ. ಆಗ ಸಣ್ಣ ಮಾರಣ್ಣ ಮತ್ತು ಶಂಕರಪ್ಪ ತಂದೆ ಪೆದ್ದಪ್ಪಯ್ಯ ಬಂದು ಗಲಾಟೆ ಬಿಡಿಸಿದರು ಎನ್ನುವುದು ಸರಿಯಲ್ಲ. ಘಟನೆಯನ್ನು ನೋಡಿದಾಗ್ಯೂ ಆರೋಪಿತರಿಗೆ ಸಹಾಯ ಮಾಡಬೇಕೆಂದು ಘಟನೆ ಬಗ್ಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ತನಿಖಾಧಿಕಾರಿಗೆ ಈ ಮೇಲೆ ಹೇಳಿದಂತೆ ಹೇಳಿಕೆ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಹೇಳಿಕೆಯ ಸಂಬಂಧಿಸಿದ ಭಾಗವನ್ನು ನಿಪಿ–4 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಶ್ರೀ ಎನ್.ಎಸ್.ಎಂ. ವಕೀಲರಿಂದ ಆರೋಪಿತನ ಪರವಾಗಿ:**

ಇಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ

ಎಸ್.ಸಿ. ನಂ. 25/2025

ಪಿಡಬ್ಲ್ಯೂ: 04
ಸಿಡಬ್ಲ್ಯೂ: 14

**ದಿನಾಂಕಃ 29-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | ಃ ಬೊಮ್ಮೇಶ |
| ತಂದೆಯ ಹೆಸರು | ಃ ದೇವರ ಸೋಮಲಿಂಗಪ್ಪ |
| ವಯಸ್ಸು | ಃ 32 ವರ್ಷ |
| ಉದ್ಯೋಗ | ಃ ವ್ಯವಸಾಯ |
| ವಾಸ ಸ್ಥಳ | ಃ ಕೋನಾಪುರ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ–**1** / ನಾಗರಾಜ್, ಅದೇ ರೀತಿ ಚಾಸಾ–**13, 15** ರಿಂದ **18** ಇವರ ಗುರುತು ಇದೆ. ನನಗೆ ಆರೋಪಿತರ ಗುರುತು ಇರುವುದಿಲ್ಲ. ಅವರುಗಳ ಮದ್ಯೆ ಯಾವ ಊರಲ್ಲಿ, ಯಾವ ಸ್ಥಳದಲ್ಲಿ ಮತ್ತು ಯಾವ ವೇಳೆಯಲ್ಲಿ ಗಲಾಟೆಯಾಗಿದೆ ಎಂದು ನನಗೆ ಗೊತ್ತಿಲ್ಲ. ಚಿದಾನಂದ ನಮ್ಮ ಊರಿನಲ್ಲಿ ತಾಲ್ಲೂಕು ಪಂಚಾಯಿತಿ ಸದಸ್ಯನಾಗಿದ್ದಾನೆ. ಆರೋಪಿತರು ಏನಾಗಿದ್ದಾರೆಂದು ನನಗೆ ಗೊತ್ತಿಲ್ಲ. ತನಿಖಾಧಿಕಾರಿಗೆ ನಾನು ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲು: ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

**2.** ದಿನಾಂಕ **11–10–2020** ರಂದು ರಾತ್ರಿ **7.30** ಗಂಟೆಗೆ ನಾನು ನಮ್ಮ ಊರಿನ ನಾಗರಾಜ್, ಬೊಮ್ಮಲಿಂಗ, ಶ್ರೀನಿವಾಸ, ಪೆನ್ನಯ್ಯ ಇವರುಗಳು ನಮ್ಮ ಸಂಬಂಧಿಯಾದ ಚಿದಾನಂದನ ಮನೆ ಬಳಿ ಇರುವಾಗ ಆತನಿಗೆ ಆರೋಪಿತರು ಫೋನ್ ಮೂಲಕ ಕರೆ ಮಾಡಿ ದೈರ್ಯವಿದ್ದರೆ ಬೊಮ್ಮದೇವರಹಳ್ಳಿ ಗ್ರಾಮದಿಂದ ಕಣ್ ಕುಪ್ಪೆ ಹಳ್ಳಿ ರಸ್ತೆಯ ಬಳಿ ಡಬ್ಬ ಅಂಗಡಿ ಹತ್ತಿರ ಬರುವಂತೆ ತಿಳಿಸಿದರು, ಅದರಂತೆ ನಾವು **7.00** ಗಂಟೆಗೆ ಅಲ್ಲಿಗೆ ಹೋದಾಗ ಹಳೆ ಚುನಾವಣೆಯ ದ್ವೇಷ ಇಟ್ಟುಕೊಂಡು ಆರೋಪಿತರು ಕೊಲೆ ಮಾಡಬೇಕೆಂಬ ಉದ್ದೇಶದಿಂದ ಕೈಕಾಲುಗಳಿಂದ ಹೊಡೆದರು ಮತ್ತು ಆರೋಪಿ ಲೋಕೇಶ್ ನನಗೆ ದೊಣ್ಣೆಯಿಂದ ಮೈಕೈಗೆ ಹೊಡೆದು ನೋವುಂಟು ಮಾಡಿದ ಪೆನ್ನಯ್ಯನಿಗೆ ಬಸವರಾಜ್ ಕಲ್ಲಿನಿಂದ ಎದಗೆ ಬೆನ್ನಿಗೆ ಗುದ್ದಿ ನೋವುಂಟು ಮಾಡಿದ ಮತ್ತು ಶ್ರೀನಿವಾಸನನ್ನು ಲೋಕೇಶ, ಯರ್ರಿಸ್ವಾಮಿ ಶಿವರಾಜ್ ಹಾಗೂ ಬಸವರಾಜ್ ಇವರುಗಳು ಹಿಡಿದುಕೊಂಡು ಲಿಂಗಾರೆಡ್ಡಿ ಮತ್ತು ಮಲಿಯಮ್ಮ ತಮ್ಮ ಕೈಯಲ್ಲಿದ್ದ ಮಚ್ಚನ್ನು ಕಿತ್ತುಕೊಂಡು ಶ್ರೀನಿವಾಸನ ಕುತ್ತಿಗೆಗೆ ಹಲ್ಲೆ

ಮಾಡಿದಾಗ ಆತ ತನ್ನ ಎಡಗೈಯನ್ನು ಅಡ್ಡಕೊಟ್ಟಿದ್ದರಿಂದ ನಿಂಗಾರೆಡ್ಡಿ ತನ್ನ ಕೈಯಲ್ಲಿದ್ದ ಮಚ್ಚಿಂದ ನಾಗರಾಜನ ಕುತ್ತಿಗೆಗೆ ಹಾಕಿ ಕೊಲೆ ಮಾಡಲು ಬಂದಾಗ ಆತ ತಪ್ಪಿಸಿಕೊಂಡ ಆದರೂ ಆತನ ಬಲ ಬುಜಕ್ಕೆ ಪೆಟ್ಟಾಯಿತು ಎನ್ನುವುದು ಸರಿಯಲ್ಲ. ನಿಂಗಾರೆಡ್ಡಿ ಮಚ್ಚಿನಿಂದ ಬೊಮ್ಮಲಿಂಗನ ಕುತ್ತಿಗೆಗೆ ಹೊಡೆಯಲು ಹೋದಾಗ ತಪ್ಪಿಸಿಕೊಳ್ಳಲು ಬಲಗೈ ಅಡ್ಡಕೊಟ್ಟಿದ್ದರಿಂದ ಆತನ ಎರಡೂ ಕೈಗಳಿಗೂ ಮಚ್ಚಿನ ಹೊಡೆತ ಬಿದ್ದು ರಕ್ತಗಾಯಗಳಾದವು ಎನ್ನುವುದು ಸರಿಯಲ್ಲ. ಸಣ್ಣ ಮಾರಣ್ಣ ಮತ್ತು ಶಂಕರಪ್ಪ ಬಂದು ಗಲಾಟೆಯನ್ನು ಬಿಡಿಸಿದರು ಎನ್ನುವುದು ಸರಿಯಲ್ಲ. ಗಾಯಾಳುಗಳನ್ನು ರಾಂಪುರ ಆಸ್ಪತ್ರೆಗೆ ಕಳುಹಿಸಿಕೊಡಲಾಯಿತು ಎನ್ನುವುದು ಗೊತ್ತಿಲ್ಲ. ತನಿಖಾಧಿಕಾರಿಗೆ ಈ ಮೇಲೆ ಸೂಚಿಸಿದಂತೆ ಹೇಳಿಕೆ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಹೇಳಿಕೆಯ ಸಂಬಂಧಿಸಿದ ಭಾಗವನ್ನು ನಿಪಿ–**3** ಎಂದು ಗುರುತಿಸಲಾಯಿತು. ಆರೋಪಿತರು ನನಗೆ ಗೊತ್ತಿದ್ದಾಗ್ಯೂ ನಾವು ಮತ್ತು ಅವರು ರಾಜಿ ಮಾಡಿಕೊಂಡು ಈ ಘಟನೆ ಬಗ್ಗೆ ಸಂಪೂರ್ಣ ಗೊತ್ತಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: ಶ್ರೀ ಎನ್.ಎಸ್.ಎಂ. ವಕೀಲರಿಂದ ಆರೋಪಿತನ ಪರವಾಗಿಃ**

ಇಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ

ಎಸ್.ಸಿ. ನಂ. 25/2025

ಪಿಡಬ್ಲ್ಯೂ: 02
ಸಿಡಬ್ಲ್ಯೂ: 05

**ದಿನಾಂಕ: 29-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | : ಓಬಳಸ್ವಾಮಿ |
| ತಂದೆಯ ಹೆಸರು | : ದೇವೇಂದ್ರಪ್ಪ |
| ವಯಸ್ಸು | : 34 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸ ಸ್ಥಳ | : ಬಿ. ಹನುಮಾಪುರ |

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರವರಿಂದ:**

ಪ್ರಾಸಾ–**1** ಗೊತ್ತು. ಕೋನಾಪುರದ ಬೊಮ್ಮಲಿಂಗ ಮತ್ತು ಶ್ರೀನಿವಾಸ್ ಇವರ ಬಗ್ಗೆ ಗೊತ್ತು. ಈಗ **5** ವರ್ಷದ ಹಿಂದೆ ನಾನು ರಾಂಪುರ ಬಸ್ ನಿಲ್ದಾಣದಲ್ಲಿ ನಿಂತುಕೊಂಡಿದ್ದೆ. ನನಗೆ ಠಾಣೆಗೆ ಬರುವಂತೆ ಹೇಳಿದರು ಅದರಂತೆ ನಾನು ಠಾಣೆಗೆ ಹೋದಾಗ ನನಗೆ ನಿಂತುಕೊಳ್ಳುವಂತೆ ಹೇಳಿದರು ನಾನು ನಿಂತುಕೊಂಡೆ. ಪೊಲೀಸರು ಫೊಟೋ ತೆಗೆದುಕೊಂಡರು ಮತ್ತು ನನ್ನ ಸಹಿ ಪಡೆದುಕೊಂಡರು. ಆಗ ತೆಗೆಯಲಾದ ಫೊಟೋವನ್ನು ನೋಡುತ್ತಿದ್ದು ಅವುಗಳನ್ನು ನಿಪಿ–**2** ಎಂದು ಗುರುತಿಸಲಾಯಿತು. ಆ ಫೊಟೋದಲ್ಲಿ ಬೊಮ್ಮಲಿಂಗ ಮತ್ತು ಶ್ರೀನಿವಾಸ್ ಬಟ್ಟೆಗಳನ್ನು ಹಿಡಿದುಕೊಂಡಿರುವುದು ಕಾಣಿಸುತ್ತದೆ. ಈಗ ನನಗೆ ತೋರಿಸಲಾದ ನಿಪಿ–**1** ರಲ್ಲಿ ನನ್ನ ಸಹಿ ಇದ್ದು ಅದನ್ನು ನಿಪಿ–**1**(ಬಿ) ಎಂದು ಗುರುತಿಸಲಾಯಿತು. ಅದೇ ರೀತಿ ಸೀಲಾದ ಎರಡು ಬಟ್ಟೆ ಚೀಲಗಳ ಮೇಲೆ ನನ್ನ ಸಹಿವುಳ್ಳ ಚೀಟಿಗಳನ್ನು ಅಂಟಿಸಲಾಗಿದೆ. ಬೆಳಗಿನ ವೇಳೆ ನನ್ನ ಸಹಿಗಳನ್ನು ಪಡೆದುಕೊಳ್ಳಲಾಗಿದೆ. ಯಾವ ಕಾರಣಕ್ಕಾಗಿ ಬೊಮ್ಮಲಿಂಗ ಹಾಗೂ ಶ್ರೀನಿವಾಸ ಅಲ್ಲಿಗೆ ಬಂದಿದ್ದರು ಎಂದು ಗೊತ್ತಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲು: ಮಾನ್ಯ ಸರ್ಕಾರಿ ಅಭಿಯೋಜಕರವರಿಂದ:**

**2.** ದಿನಾಂಕ **13–10–2020** ರಂದು ಮುಂಜಾನೆ **11.15** ರಿಂದ **11.45** ರ ಅವಧಿಯಲ್ಲಿ ಪೊಲೀಸರು ಬೊಮ್ಮಲಿಂಗ ಹಾಗೂ ಶ್ರೀನಿವಾಸ್ ಹಾಜರುಪಡಿಸಿದ ರಕ್ತ ಹತ್ತಿದ ಬಟ್ಟೆಗಳನ್ನು ನಿಪಿ–**1** ಮಹಜರ್ ಮೂಲಕ ತಮ್ಮ ವಶಕ್ಕೆ ತೆಗೆದುಕೊಂಡು ಅವುಗಳನ್ನು ಬಟ್ಟೆ ಚೀಲಗಳಲ್ಲಿ ಹಾಕಿ, ಸೀಲು ಮಾಡಿ, ನಮ್ಮ ಸಹಿವುಳ್ಳ ಚೀಟಿಗಳನ್ನು ಅಂಟಿಸಿದರು ಎಂದರೆ ನನಗೆ ಸಹಿ ಮಾಡಿದ್ದು ಗೊತ್ತು. ನನಗೆ ಮಹಜರ್ ಬಗ್ಗೆ ಮಾಹಿತಿ ಇದ್ದಾಗ್ಯೂ ಈಗ ಆರೋಪಿತರಿಗೆ

ಸಹಾಯ ಮಾಡಲು ಕೇವಲ ಸಹಿ ಮಾಡಿದೆ ಪೊಟೋ ತೆಗೆಸಿಕೊಂಡೆ ಎಂದು ಅಪೂರ್ಣವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: ಶ್ರೀ ಎನ್.ಎಸ್.ಎಂ. ವಕೀಲರಿಂದ ಆರೋಪಿತನ ಪರವಾಗಿಃ**

**3**. ಆ ಬಟ್ಟೆ ಚೀಲಗಳಲ್ಲಿ ಏನು ಇದೆ ಎಂಬುದು ನಮ್ಮ ಮುಂದೇನು ತೋರಿಸಲಿಲ್ಲ ಎನ್ನುವುದು ನಿಜ. ಯಾವ ಕಾರಣಕ್ಕಾಗಿ ಪೊಲೀಸರು ಪೊಟೋ ತೆಗೆಸಿದರು ಎಂದು ಗೊತ್ತಿಲ್ಲ. ನಿಪಿ–**1** ರಲ್ಲಿ ಹೇಳಲಾದ ವಿಷಯವನ್ನು ನಾನು ತಿಳಿದುಕೊಂಡಿಲ್ಲ ಎನ್ನುವುದು ನಿಜ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ</u>

ಎಸ್.ಸಿ. ನಂ. 25/2025

ಪಿಡಬ್ಲ್ಯೂ: 01
ಸಿಡಬ್ಲ್ಯೂ: 04

<u>ದಿನಾಂಕಃ **29-09-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

| | |
|---|---|
| ಸಾಕ್ಷಿದಾರರ ಹೆಸರು | ಃ ಶಿವಕುಮಾರ್ |
| ತಂದೆಯ ಹೆಸರು | ಃ ಸಿದ್ದೇಶಪ್ಪ |
| ವಯಸ್ಸು | ಃ 42 ವರ್ಷ |
| ಉದ್ಯೋಗ | ಃ ವ್ಯಾಪಾರ |
| ವಾಸ ಸ್ಥಳ | ಃ ಕೆರೆ ಕೊಂಡಾಪುರ, ರಾಂಪುರ |

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ</u>

ನನಗೆ ಚಾಸಾ–**4** / ಓಬಳಸ್ವಾಮಿ ಇವರ ಪರಿಚಯ ಇದೆ. ರಾಂಪುರದಲ್ಲಿ ನನ್ನ ಬಟ್ಟೆ ಅಂಗಡಿ ಇದ್ದು ಈಗ ಸುಮಾರು ಮೂರು ವರ್ಷದ ಹಿಂದೆ ಪೊಲೀಸರು ನನ್ನನ್ನು ರಾಂಪುರ ಬಸ್ ನಿಲ್ದಾಣದ ಬಳಿ ಕರೆದಿದ್ದರು. ಅಲ್ಲಿಂದ ನನ್ನನ್ನು ರಾಂಪುರ ಠಾಣೆಗೆ ಕರೆದುಕೊಂಡು ಹೋದರು. ಅಲ್ಲಿ ಒಂದು ಡ್ರಸ್ ಗೆ ರಕ್ತ ಹತ್ತಿದ್ದನ್ನು ತೋರಿಸಿದರು ಮತ್ತು ನನ್ನ ಸಹಿ ಪಡೆದರು. ನಾನು ಸಹಿ ಮಾಡಿದ ದಾಖಲೆ ನೋಡುತ್ತಿದ್ದು ಅದನ್ನು ನಿಪಿ–**1** ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ–**1**(ಎ) ಎಂದು ಗುರುತಿಸಲಾಯಿತು. ನನ್ನ ಹಾಗೆ ಓಬಳೇಶ್ ಕೂಡಾ ಅದಕ್ಕೆ ಸಹಿ ಮಾಡಿದ. ಈಗ ಆ ರಕ್ತ ಹತ್ತಿದ ಬಟ್ಟೆಯನ್ನು ತೋರಿಸಿದರೆ ಗುರುತಿಸಲು ಸಾಧ್ಯವಾಗುವುದಿಲ್ಲ. ಆ ಬಟ್ಟೆ ಯಾರಿಗೆ ಸೇರಿತ್ತು ಎಂದು ಗೊತ್ತಿಲ್ಲ. ಆಗ ಮದ್ಯಾಹ್ನ **1.30** ಗಂಟೆಯಾಗಿತ್ತು. ಈಗ ನನಗೆ ತೋರಿಸಲಾದ ಸೀಲು ಇರುವಂತಹ ಬಟ್ಟೆ ಚೀಲಗಳಿಗೆ ನನ್ನ ಸಹಿವುಳ್ಳ ಚೀಟಿಗಳನ್ನು ಅಂಟಿಸಲಾಗಿದೆ. ಆ ಸಹಿಗಳನ್ನು ಪೊಲೀಸ್ ಠಾಣೆಯ ಹೊರಗೆ ಪಡೆದುಕೊಳ್ಳಲಾಗಿದೆ. ಸೀಲು ಮಾಡಿದ ಆ ಬಟ್ಟೆ ಚೀಲಗಳಲ್ಲಿ ಏನು ಇದೆ ಎಂದು ಗೊತ್ತಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

<u>ಪಾಟೀ ಸವಾಲು: ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ</u>

**2.** ಆ ದಿನ ಬೊಮ್ಮಲಿಂಗ ಎನ್ನುವವರು ತನಗೆ ಮತ್ತು ಕೋನಾಪುರದ ಶ್ರೀನಿವಾಸನಿಗೆ ಆ ಬಟ್ಟೆಗಳು ಸೇರಿವೆ ಎಂದು ತೆಗೆದುಕೊಂಡು ಬಂದಿದ್ದರು ಎನ್ನುವುದು ಗೊತ್ತಿಲ್ಲ. ದಿನಾಂಕ **13–10–2020** ರಂದು ಆ ರಕ್ತ ಹತ್ತಿದ ಬಟ್ಟೆಗಳನ್ನು ಬೆಳಗ್ಗೆ **11.15** ರಿಂದ **11.45** ರ ಅವಧಿಯಲ್ಲಿ ನಮ್ಮ ಸಮಕ್ಷಮ ಅಮಾನತ್ತುಪಡಿಸಿಕೊಂಡು ನಿಪಿ–**1** ರಂತೆ ಮಹಜರ್ ಬರೆದು ಓದಿ ಹೇಳಿ

ನಮ್ಮ ಸಹಿ ಪಡೆಯಲಾಯಿತು ಎನ್ನುವುದು ಸರಿಯಲ್ಲ. ಸದರಿ ಮಹಜರ್ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದಾಗ್ಯೂ ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: ಶ್ರೀ ಎನ್.ಎಸ್.ಎಂ. ವಕೀಲರಿಂದ ಆರೋಪಿತನ ಪರವಾಗಿಃ**

**3.** ನಾನು ಸಹಿ ಮಾಡಿದಂತಹ ಚೀಟಿಗಳುಳ್ಳ ಚೀಲಗಳನ್ನು ಬಿಚ್ಚಿ ನಮಗೆ ತೋರಿಸಿಲ್ಲ ಎನ್ನುವುದು ನಿಜ. ಓಬಳೇಶ್ ಹಾಗೂ ನಾನು ಸ್ನೇಹಿತ ಎನ್ನುವುದು ನಿಜ. ಠಾಣೆಯ ಹೊರಗೆ ನಿಮ್ಮ ಸಾಕ್ಷಿ ಸಹಿ ಬೇಕು ಎಂದು ಹೇಳಿ ಪೊಲೀಸರು ನಮ್ಮ ಸಹಿ ಪಡೆದರು ಎನ್ನುವುದು ನಿಜ. ಆ ದಾಖಲೆಯಲ್ಲಿ ಏನು ಬರೆದುಕೊಂಡರು ಎಂದು ನನಗೆ ಮಾಹಿತಿ ಇಲ್ಲ ಎನ್ನುವುದು ನಿಜ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.